# ನಗರ ಸಿವಿಲ್ ನ್ಯಾಯಾಲಯ

ಸಂಖ್ಯೆ: ಆ.ವಿ.1(ಎ)/429/2026

ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ,
ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು,
ದಿನಾಂಕಃ 24 ನೇ ಜೂನ್, 2026

## ನೇಮಕಾತಿ ಅಧಿಸೂಚನೆ

**ನಗರ ಸಿವಿಲ್ ನ್ಯಾಯಾಲಯ ಘಟಕದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಡಿ (371-ಜೆ) ಶೀಘ್ರಲಿಪಿಗಾರರು ಗ್ರೇಡ್-III, ಬೆರಳಚ್ಚುಗಾರರು, ಆದೇಶ ಜಾರಿಕಾರ, ಚಾಲಕ ಹಾಗೂ ಜವಾನ ಹುದ್ದೆಗಳಿಗಾಗಿ ನೇಮಕಾತಿ ಕುರಿತು.**

**ಆನ್-ಲೈನ್ ಮೂಲಕ ಅರ್ಜಿಸಲ್ಲಿಸಲು ಕೊನೆಯ ದಿನಾಂಕಃ 30 ನೇ ಜುಲೈ, 2026.**

ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಘಟಕದಲ್ಲಿ ಖಾಲಿ ಇರುವ **ಶೀಘ್ರಲಿಪಿಗಾರರು ಗ್ರೇಡ್-III, ಬೆರಳಚ್ಚುಗಾರರು, ಆದೇಶ ಜಾರಿಕಾರ, ಚಾಲಕ ಹಾಗೂ ಜವಾನ** ಹುದ್ದೆಗಳಿಗೆ **ಕಲ್ಯಾಣ ಕರ್ನಾಟಕ ಪ್ರದೇಶದಡಿ (371-ಜೆ)** ನೇರ ನೇಮಕಾತಿಗಾಗಿ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಹಾಗೂ ಅಭ್ಯರ್ಥಿಗಳು ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಈ ಕೆಳಗೆ ನಮೂದಿಸಿರುವ ಜಾಲತಾಣದಲ್ಲಿ ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

**ಶೀಘ್ರಲಿಪಿಗಾರರು ಗ್ರೇಡ್-III, ಬೆರಳಚ್ಚುಗಾರರು, ಆದೇಶ ಜಾರಿಕಾರ, ಚಾಲಕ ಹಾಗೂ ಜವಾನ** ಹುದ್ದೆಗಳಿಗೆ **ಆನ್ ಲೈನ್ ಅರ್ಜಿಗಳನ್ನು ಸಲ್ಲಿಸುವ** ಜಾಲತಾಣ:-

**https://bengaluru.dcourts.gov.in/recruitment-status-ccc/**

**ರಿಕ್ತ ಸ್ಥಾನಗಳ ವಿವರ**

**ಶೀಘ್ರಲಿಪಿಗಾರರು ಗ್ರೇಡ್-III**

**ಹಿಂಬಾಕಿ (ಬ್ಯಾಕ್‌ಲಾಗ್) ಹುದ್ದೆಗಳುಃ 5 ಹುದ್ದೆಗಳು**

| ಕ್ರಮ ಸಂಖ್ಯೆ | ಪ್ರವರ್ಗ | ಮೀಸಲು ರಹಿತ | ಎದ್ದು ಕಾಣುವ ಅಂಗವೈಕಲ್ಯವುಳ್ಳ ಅಭ್ಯರ್ಥಿ |
|---|---|---|---|
| 1 | ಪರಿಶಿಷ್ಟ ಜಾತಿ | 1 | |
| 2 | ಪರಿಶಿಷ್ಟ ಪಂಗಡ | 1 | |
| 3 | ಪ್ರವರ್ಗ-I | 1 | |
| 4 | ಪ್ರವರ್ಗ-IIA | 1 | |
| 5 | ಸಾಮಾನ್ಯ ಅಭ್ಯರ್ಥಿ | - | 1* |
| | **ಒಟ್ಟು** | **4** | **1** |

4 ನೇ ಬಿಂದು - *ಅಂಧ ಮತ್ತು ದೃಷ್ಟಿ ಮಾಂದ್ಯ

